

ನಮ್ಮೂರಿಂದ ವರ್ಗಾವಣೆ ಮಾಡಿ ನಮ್ಮ ಮಕ್ಕಳ ಉತ್ತಮ ಭವಿಷ್ಯ ರೂಪಿಸಿಕೊಡಬೇಕೆಂದು ನೊಂದ ಪೋಷಕರು ಮನವಿ ಮಾಡಿದ್ದರು. ಜೊತೆಗೆ ತಾವು ತೆಗೆದಿರುವ ಆಫೀಸ್ ರೂಮಿನಲ್ಲಿ ಎರಡು ಬೀರು ಬಾಟಲ್‌ಗಳು ಇರುವ ಫೋಟೊವನ್ನು ಲಗತ್ತಿಸಿ ಕಳುಹಿಸಿದ್ದರು. ಆಶ್ಚರ್ಯವೆಂದರೆ ಈ ಅರ್ಜಿಯಲ್ಲಿ ಊರಿನ ಹಲವು ಹೆಣ್ಣುಮಕ್ಕಳ ಸಹಿಗಳೂ ಸೇರಿದ್ದವು. ಬಹುಶಃ ಹಿಂಗೆಲ್ಲ ಬರೆದಿದ್ದಾರೆಂದು ಅವರಿಗೆ ಮೊದಲೇ ತಿಳಿದಿದ್ದರೆ ಸೈನ್ ಹಾಕುತ್ತಿದ್ದರೊ ಬಿಡುತ್ತಿದ್ದರೋ ಪರೀಕ್ಷಿಸಬಹುದಿತ್ತೇನೊ! ಆದರೆ ಅವರು ಅರ್ಜಿ ಬರೆಯುವ ಮೊದಲೇ ಸಹಿ ಹಾಕಿದಂತಿತ್ತು. ಊರಿನ ಹೆಂಗಸರಿಗೆ ‘ತಿಮ್ಮಪ್ಪ ಮೇಷ್ಟ್ರು ನಮಗೂ ಮೇಷ್ಟ್ರು, ನಮ್ಮ ಮಕ್ಕಳಿಗೂ ಮೇಷ್ಟ್ರು, ನಮಿಗೆ ಹೇಳುಸ್ತಿದ್ದ ಮಗ್ಗಿನೆ ನಮ್ಮ ಮಕ್ಳು ಕೈಲೂ ಹೇಳುಸ್ತಾವ್ರೆ’ ಎಂಬುದೊಂದೇ ಕೊರಗಿದ್ದಂತಿತ್ತು. ಊರಿನ ಹಿರಿಯರ ಸಹಿ ಇಲ್ಲದಿದ್ದರೂ ಅವರು ಮೊದಲಿನಂತೆ ಮೇಷ್ಟ್ರು ಪರ ವಹಿಸುವುದನ್ನು ಹಂತ ಹಂತವಾಗಿ ಕಡಿಮೆ ಮಾಡಿಕೊಂಡಿದ್ದರು. ಕಾರಣ ಇತ್ತೀಚೆಗೆ ಮೇಷ್ಟ್ರು ಕಾನೂನು ಹೇಳ್ತೈತೆ ಕಣ್ರಿ ಎಂದು ಬಿಸಿಯೂಟದ ಅಡುಗೆಗೂ, ಎಸ್‌ಡಿಎಮ್‌ಸಿಗು ಕೆಳ ಜಾತಿಯ ಹೆಂಗಸರನ್ನೆಲ್ಲ ಸೇರಿಸಿಕೊಂಡಿದ್ದರು.

ಈ ಎರಡೂ ವರ್ಗಕ್ಕೆ ಸೇರದ ಇನ್ನೊಂದು ಗುಂಪಿತ್ತು. ಆ ಗುಂಪು ಎದೆ ಸೀಳಿದರೆ ನಾಕಕ್ಷರವಿಲ್ಲದಿದ್ದರೂ ಧರ್ಮದ ಶ್ರೇಷ್ಠತೆಯನ್ನು ನೆತ್ತಿಗೇರಿಸಿಕೊಂಡೇ ತಿರುಗಾಡುತ್ತಿರುತ್ತಿತ್ತು. ಯಾರಾದರು ಅಮಾಯಕರು ಸಿಕ್ಕರೆ ಬಿಟ್ಟಿ ಪ್ರವಚನಕ್ಕೆ ಸದಾ ಸಿದ್ದವಿರುತ್ತಿತ್ತು. ‘ನಾವು ಒಂದು ಪಾಠಕ್ಕೆ ಸೆಟ್ ಆಗರ್ತಿವಿ, ಇನ್ನೇನು ಅದನ್ನೆ ಕಲುಸ್ಬೇಕು ಅನ್ನೊಷ್ಟರಲ್ಲಿ ಇನ್ನೊಂದು ಸರ್ಕಾರ ಬಂದು ಆ ಪಾಠ ಸರಿ ಇಲ್ಲ ಈ ಪಾಠ ಮಾಡ್ರಿ ಅಂತಾರೆ, ನಮ್ಮನ್ನೊಂತರ ಕಬ್ಬು ಅರೆಯುವ ಮಿಷನ್ ಮಾಡ್ಕೆಂಡವ್ರೆ ಅವ್ರು ತರ್ಕಿದ್ದೆಲ್ಲ ರಸ ಮಾಡಿ ಕೊಡಕೆ’ ಅಂತ ಯಾವುದೊ ವಿಷ ಗಳಿಗೆಯಲ್ಲಿ ಬಿಟ್ಟಿ ಉಪದೇಶ ಸಂಘದ ಜಯರಾಮನ ಮುಂದೆ